–

# <u>ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ, ಕನಕಪುರ</u>

## ಸಿ.ಸಿ. ನಂ. 512/2026

**: <u>ಆಪಾದನೆ</u> :**

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ ?

ಉತ್ತರಃ

2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ?

ಉತ್ತರಃ

3. ನಿಮ್ಮ ಪರ ವಿಚಾರಣೆ ಆಗಲು ಬಯಸುವಿರಾ ?

ಉತ್ತರಃ

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ/ಳಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸುತ್ತೇನೆ.

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್. ಸಿ. ಕನಕಪುರ.**

ಆರೋಪಿ ಸಹಿ

Representative of accused present.
Adv. VND files Vakalath for Accused.

Accused files memo along with copy of GPA authorizing him to represent the accused as the earlier accused is no longer the employee.

Accused submits he wants to plea guilty.

Consequence of pleading guilty is made known to Accused. Still Accused wants to plead guilty.

Therefore substance of Accusation is read over to Accused. Accused pleads guilty.
Hence this court is proceeds to pass the following;

**ORDER**

Accused is convicted for offence punishable U/Sec.30 , R/w 26 and 6A of the Karnataka Shops and Commerical Establishments Act 1961

Accused is sentenced to pay a fine of Rs.1,000/- for the offence punishable U/Sec.30 R/w Sec. 26 of the Karnataka Shops and Commercial Establishments Act 1961. In default of payment of fine, he shall under go for S.I. for a period of 30 days.

Accused is sentenced to pay a fine of Rs.250/- for the offence punishable U/Sec.30 R/w Sec. 6A of the Karnataka Shops and Commercial Establishments Act 1961. In default of payment of fine, he shall under go for S.I. for a period of 30 days.

Total fine amount is 1,250/-

Office to collect fine.

Accordingly case is disposed off.

**III Addl. Civil Judge and JMFC.**
**Kanakapura.**

# <u>ತೃತೀಯ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ರವರ ನ್ಯಾಯಾಲಯ, ಕನಕಪುರ</u>

<u>ಸಿ ಸಿ ನಂಃ 828/2010</u>

ಪಿರ್ಯಾದುದಾರರು : ಕಾರ್ಮಿಕ ನಿರೀಕ್ಷಕರು, ಕನಕಪುಕರ ವೃತ್ತ, ಕನಕಪುರ

– ವಿರುದ್ಧ –

ಆರೋಪಿ ಮಕ್ಬೂಲ್ ಅಹಮದ್.
ಮನ್ಸೂನ್ ಚಿಕನ್. ಸೆಂಟರ್,
ರಾಮನಗರ ರಸ್ತೆ ,
ಕನಕಪುರ ಟೌನ್.

**:: <u>ಆರೋಪಣೆ</u> ::**

ದಿನಾಂಕ 22.06.2010 ರಂದು ಆಪಾದಿತ ಸಂಸ್ಥೆಗೆ ಭೇಟಿ ನೀಡಿ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ 1961 ನಿಯಮ 1963 ರಡಿಯಲ್ಲಿ ತನಿಖೆಯನ್ನು ನಡೆಸಿದಾಗ, ಸದರಿ ಅಂಗಡಿಯಲ್ಲಿ ಸದ್ದಾಂ ಹುಸೇನ್. ಬಿ ನ್. ನೂರು ಎಂಬ 12 ವರ್ಷದ ಬಾಲ ಕಾರ್ಮಿಕನನ್ನು ಸಹಾಯಕನಾಗಿ ನೇಮಿಸಿಕೊಂಡಿರುವುದು ಕಂಡುಬಂದಿರುತ್ತದೆ. ಕಂಡು ಬಂದ ಉಲ್ಲಂಘನೆಗಳ ಬಗ್ಗೆ ನಿರೀಕ್ಷಣಾ ಟಿಪ್ಪಣಿಯನ್ನು ಸ್ಥಳದಲ್ಲಿಯೇ ತಯಾರಿಸಿದ್ದು, , ಸ್ಥಳದಲ್ಲಿ ಹಾಜರಿದ್ದ ಆರೋಪಿಯಾದ ನಿಮ್ಮ ತಮ್ಮನಿಗೆ ನೀಡಲಾಗಿ ಅವರು ಸಹಿ ಮಾಡಿ ಪಡೆಯಲು ತಿರಸ್ಕರಿಸಿರುತ್ತಾರೆ. ಬಾಲ ಕಾರ್ಮಿಕನಿಗೆ ಸಂಬಂಧಿಸಿದಂತೆ ವಯಸ್ಸಿನ ದೃಡೀಕರಣ ಪತ್ರವನ್ನು ತೋರಿಸಲು ಸಂಸ್ಥೆಯಲ್ಲಿ ಹಾಜರಿದ್ದವರಿಗೆ ಕೇಳಿದಾಗ ಯಾವುದೇ ದಾಖಲೆ ನೀಡಿರುವುದಿಲ್ಲ. ಆದ್ದರಿಂದ ಬಾಲ ಕಾರ್ಮಿಕನನ್ನು ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ವೈದ್ಯಾಧಿಕಾರಿಗಳಿಂದ ವಯಸ್ಸಿನ ದೃಡೀಕರಣ ಪತ್ರ ಪಡೆಯಲಾಯಿತು. ನಂತರ ಬಾಲ ಕಾರ್ಮಿಕನನ್ನು ಹತ್ತಿರದ ಸರ್ಕಾರಿ ನೂತನ ಹಿರಿಯ ಪ್ರಾಥಮಿಕ ಶಾಲೆ , ಬಾಣಂತಮ್ಮ ಬಡಾವಣೆ, ಕನಕಪುರ ಟೌನ್ ಇಲ್ಲಿಗೆ ದಾಖಲಿಸಲಾಯಿತು. ತಪಾಸಣೆ ವೇಳೆಯಲ್ಲಿ ಹಾಜರಿದ್ದ ಸಂಸ್ಥೆಯ ಆರೋಪಿಯಾದ ನೀವು ನೋಟಿಸಿಗೆ ಸಹಿ ಮಾಡಿ ಪಡೆಯಲು ನಿರಾಕರಿಸಿದ್ದು ಹಾಗೂ ಅವರ ಹೆಸರು ಕೂಡ ಹೇಳಿರುವುದಿಲ್ಲ. ಆದ್ದರಿಂದ ದಿನಾಂಕಃ 24.07.2010 ರ ಸಿ.ಪಿ.ಯು ಅಂಚೆ ಮುಖಾಂತರ ಕಾರಣ ತೋರಿಸಲು ಕೇಳುವ ಸೂಚನಾ ಪತ್ರವನ್ನು ಹಾಗೂ ಎಲ್ಲಾ ದಾಖಲೆಗಳನ್ನು ಆರೋಪಿಯಾದ ನಿಮಗೆ ಕಳುಹಿಸಲಾಗಿದ್ದು ಇದುವರೆವಿಗೂ ಕಾಲಾವಕಾಶ ನೀಡಿದ್ದರೂ ನೋಟಿಸಿಗೆ ಯಾವುದೇ ಉತ್ತರ ನೀಡಿರುವುದಿಲ್ಲ. ಸದರಿ ಸೂಚನಾ ಪತ್ರವು ಸ್ವೀಕೃತವಾದರೂ ಸಹ ಸೂಚನಾ ಪತ್ರ ನೀಡಿದ ಸಮಯದಲ್ಲಿ ಕಂಡು ಬಂದ ಉಲ್ಲಂಘನೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ ಆಪಾದಿತರು ಪಾಲನಾ ವರದಿಯನ್ನು ಸಲ್ಲಿಸಿರುವುದಿಲ್ಲ ಹಾಗೂ ದಾಖಲೆ ಹಾಜರುಪಡಿಸಿರುವುದಿಲ್ಲ ಎಂಬುದು ತನಿಖೆಯಿಂದ ದೃಢಪಟ್ಟಿರುವುದರಿಂದ ಆ ಮೂಲಕ ಕರ್ನಾಟಕ ಅಂಗಡಿ

ಮತ್ತು ವಾಣಿಜ್ಯ ಸಂಸ್ಥೆ ಕಾಯಿದೆ 1961 ನಿಯಮ 1963 ರ ಮೇಲ್ಕಂಡ ಉಲ್ಲಂಘನೆಗಳಿಗೆ ಆರೋಪಿಯಾದ ನೀವು 30, ಕಲಂ 33 ಹಾಗೂ ನಿಯಮ 26 ರ ಉಲ್ಲಂಘನೆಯಾಗಿರುತ್ತದೆ, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಸದರಿ ಅಪರಾಧ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರೀ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯನ್ನು ಈ ದಿನ ದಿನಾಂಕಃ 25.09.2025 ರಂದು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆವರ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

C/C 3 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಕನಕಪುರ.

and are ordered to be destroyed and cash of Rs. 70/- sized in said PF and PR is confiscated to the Government.